0185897

| ನೋಂದಣಿ ಸಂಖ್ಯೆ : Registration No. : | | | | | | | | | | | |
|---|---|---|---|---|---|---|---|---|---|---|---|

V1 – 2026

| ವಿಷಯ ಸಂಕೇತ / Subject Code | 01 (NS) |
|---|---|

# ಕನ್ನಡ / KANNADA

[ಸಮಯ: 3 ಗಂಟೆಗಳು] [ಒಟ್ಟು ಪ್ರಶ್ನೆಗಳ ಸಂಖ್ಯೆ : 52] [ಗರಿಷ್ಠ ಅಂಕಗಳು : 80]

[Time : 3 Hours] [Total No. of questions : 52] [Max. Marks : 80]

ಸೂಚನೆ : "ಅ–ವಿಭಾಗ" ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

## ಅ – ವಿಭಾಗ

I. (ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **(10 × 1 = 10)**

1) ಇದರಿಂದ ಪರಿಮಳವನ್ನು ಅರಿಯಬಹುದು.

(ಅ) ಪುಷ್ಪದಿಂದ

(ಆ) ಫಲದಿಂದ

(ಇ) ಕಾಯಿಯಿಂದ

(ಈ) ಚಿಗುರಿನಿಂದ

2) ಚಿಗುರೆಂದುಂ ಮೆಲೆ ಬೇವು ಸ್ವಾದವಹುದೇ
ಚೇಳ್ ಚಿಕ್ಕದೆಂದಳ್ಕರಿಂ।
ತೆಗೆಯಲ್ ಕಚ್ಚದೆ ಪಾಲನೂಡಿ ಫಣಿಯಂ
ಸಾಕಲ್ಕೆ ವಿಶ್ವಾಸಿಯೇ॥
ಖಗಮಂ ಸಾಕುವೆನೆಂದು ಗೂಗೆಮರಿಯಂ
ಸಂಪ್ರೀತಿಯಂದೋವರೇ।
ಪಗೆಯಂ ಬಾಲಕನೆಂಬರೇ ಹರಹರಾ
ಶ್ರೀಚೆನ್ನಸೋಮೇಶ್ವರಾ॥

– ಈ ಪದ್ಯಭಾಗಕ್ಕೆ ಸಂಬಂಧಿಸಿದಂತೆ ಕೆಳಗಿನ ಯಾವ ಹೇಳಿಕೆಗಳು ಸರಿಯಾದ ಜೋಡಿಯಾಗಿವೆ?

(ಒಂದು) ಉಪಾಯ ಬಲ್ಲವನಿಗೆ ಅಪಾಯವಿಲ್ಲ.

(ಎರಡು) ಶತ್ರುವನ್ನು ಕಿರಿಯವನು ಎಂದು ಭಾವಿಸಬಾರದು.

(ಮೂರು) ಹುಟ್ಟುಗುಣ ಸುಟ್ಟರೆ ಹೋಗುವುದು.

(ನಾಲ್ಕು) ಚಿಕ್ಕದೆಂದು ಯಾವುದನ್ನೂ ಉಪೇಕ್ಷಿಸಬಾರದು.

(ಅ) (ಮೂರು) ಮತ್ತು (ನಾಲ್ಕು) ಸರಿ

(ಆ) (ಒಂದು) ಮತ್ತು (ಎರಡು) ಸರಿ

(ಇ) (ಎರಡು) ಮತ್ತು (ನಾಲ್ಕು) ಸರಿ

(ಈ) (ಒಂದು) ಮತ್ತು (ನಾಲ್ಕು) ಸರಿ

3) ಜಾಲಿಯ ರಸಾಸ್ವಾದ ಹೇಗಿರುತ್ತದೆ?

(ಅ) ಸಿಹಿಯಾಗಿ

(ಆ) ಹುಳಿಯಾಗಿ

(ಇ) ವಿಷದಂತೆ

(ಈ) ಉಪ್ಪಿನಂತೆ

4) ಜೀಸಸ್‌ನ ಶಿಲುಬೆಗೇರಿಸಿದವರು ಇವರ ವಕಾಲತ್ತು ನಡೆಸಿದರು.

(ಅ) ಯಾಜಕರ (ಆ) ರೋಮನ್ನರ

(ಇ) ಯೇಸು (ಈ) ಬರಬ್ಬನ

5) ಕವಯಿತ್ರಿ ಸುಕನ್ಯಾ ಮಾರುತಿ ಹೇಳುವಂತೆ ಜನರಿಗೆ ಇದಕ್ಕೆ ಗತಿಯಿಲ್ಲ.

(ಅ) ನೀರಿಗೆ (ಆ) ಹಣಕ್ಕೆ

(ಇ) ಗಂಜಿಗೆ (ಈ) ಮನೆಗೆ

6) "ನಮ್ಮ ವೈದ್ಯಲೋಕ ಬಲ್ಲ ಅತ್ಯಂತ ಪ್ರಾಮಾಣಿಕ, ಪ್ರತಿಭಾವಂತ ಡಾಕ್ಟರು ತಿಮ್ಮಪ್ಪ. ಈ ಕಣ್ಣಿನ ರೋಗ ಅವರ ವಲಯಕ್ಕೆ ಸೇರಿದ್ದು. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತೆ".
– ಡಾ. ಚಂದ್ರಪ್ಪನವರ ಈ ಮಾತುಗಳು ಕೆಳಗಿನ ಯಾವ ಹೇಳಿಕೆಯನ್ನು ಸಮರ್ಥಿಸುತ್ತದೆ?

(ಅ) ಡಾ. ತಿಮ್ಮಪ್ಪನವರ ಬಗ್ಗೆ ಅಭಿಮಾನ

(ಆ) ಡಾ. ತಿಮ್ಮಪ್ಪನವರ ಬಗ್ಗೆ ಅಸಹನೆ

(ಇ) ಡಾ. ತಿಮ್ಮಪ್ಪನವರ ಬಗ್ಗೆ ಕೋಪ

(ಈ) ಡಾ. ತಿಮ್ಮಪ್ಪನವರ ಬಗ್ಗೆ ಅಗೌರವ

7) ಇದು ಕಲಾಂ ಅವರ ಆತ್ಮಚರಿತ್ರೆಯ ಹೆಸರು.

(ಅ) ಬಿಗ್ ಬ್ಯಾಂಗ್ (ಆ) ಪ್ರಳಯ 2012

(ಇ) ನೆನಪಿನ ದೋಣಿಯಲ್ಲಿ (ಈ) ವಿಂಗ್ಸ್ ಆಫ್ ಫೈರ್

8) ನಿರೂಪಕರ ಗೆಳೆಯ ಪ್ರಕಾಶ್ ಇವರು.

(ಅ) ಇಕಾಲಜಿಸ್ಟ್ (ಆ) ಎಕನಾಮಿಸ್ಟ್

(ಇ) ಸೈಕಿಯಾಟ್ರಿಸ್ಟ್ (ಈ) ರೇಡಿಯಾಲಜಿಸ್ಟ್

9) ಆನೆ ಶಾಸ್ತ್ರದವನು ಹೀಗೆಂದು ಭವಿಷ್ಯ ನುಡಿದಿದ್ದ.

(ಅ) ಈ ಆನೆಯಿಂದ ಅದೃಷ್ಟವಿದೆ

(ಆ) ಈ ಆನೆಯಿಂದ ಕೆಟ್ಟದಾಗುತ್ತದೆ

(ಇ) ಈ ಆನೆಯಿಂದ ಜಗದ್ಗುರುಗಳ ಜೀವಕ್ಕೆ ಅಪಾಯವಿದೆ

(ಈ) ಈ ಆನೆಯಿಂದ ಐದು ಜನ ಪ್ರಾಣ ಕಳೆದುಕೊಳ್ಳುತ್ತಾರೆ

10) "ಆನೆ ಅಷ್ಟು ದೊಡ್ಡ ಪ್ರಾಣಿಯಾದರೂ ಸುಳಿವೇ ಕೊಡದೆ ತಂಗಾಳಿಯಂತೆ ಓಡಾಡಬಲ್ಲದು ಎನ್ನುವುದು ನಾಗರಾಜನ ಸರ್ವಿಸ್ಸಿನಲ್ಲಿ ಎಷ್ಟೋ ಸಾರಿ ಗಮನಕ್ಕೆ ಬಂದಿತ್ತು. ಅದಕ್ಕೇ ಅವನು ಮೈಯೆಲ್ಲ ಕಣ್ಣಾಗಿ ಕುಳಿತಿದ್ದ".

– ಇಲ್ಲಿ ಆನೆಯನ್ನು ಕುರಿತು ಹೇಳಿರುವ ಮಾತಿನಲ್ಲಿ ಮೂಡುವ ಭಾವವೆಂದರೆ.

(ಅ) ಆನೆ ದೊಡ್ಡ ಪ್ರಾಣಿ, ಅದು ಅಸೂಕ್ಷ್ಮವಾಗಿರುತ್ತದೆ

(ಆ) ಆನೆ ದೊಡ್ಡ ಪ್ರಾಣಿ, ಅದು ಗದ್ದಲ ಮಾಡಿಕೊಂಡೇ ಓಡಾಡುತ್ತದೆ

(ಇ) ಆನೆ ದೊಡ್ಡ ಪ್ರಾಣಿ, ಅದು ಸೂಕ್ಷ್ಮವಾಗಿ ವರ್ತಿಸುತ್ತದೆ

(ಈ) ಆನೆ ದೊಡ್ಡ ಪ್ರಾಣಿ, ಅದು ಸೂಕ್ಷ್ಮವಾಗಿ ವರ್ತಿಸುವುದಿಲ್ಲ

(ಆ) ಬಿಟ್ಟ ಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. **(5 × 1 = 5)**

(ರಾಮಾಯಣದ, ವಾರ್ತಾ ಇಲಾಖೆ, ಮಹಾಭಾರತದ, ನಿಶಾ ಶರ್ಮ, ಸಿ.ಎನ್.ಆರ್. ರಾವ್, ಕುದುಪನಿಗೆ)

11) ದುರಾಸೆಯ ಹುಡುಗನನ್ನು ನಿರಾಕರಿಸಿದವರು ____________.

12) ಕನ್ನಡದ ಮೂಲಕ ಕಲಿತು ಶ್ರೇಷ್ಠ ವಿಜ್ಞಾನಿಯಾದವರು ____________.

13) ಧಣಿಗಳು ಹೊಳೆಯ ಹೂಳೆತ್ತಲು ಸೂಚಿಸಿದ್ದು ____________.

14) ____________ ಕತೆ ಹೇಳಬೇಕೆಂದು ಮನೋರಮೆ ಕೇಳಿದಳು.

15) ವೀರೇಂದ್ರ ಸಿಂಪಿಯವರ ದೃಷ್ಟಿಯಲ್ಲಿ ಹಳ್ಳಿಯ ಚಹಾದ ಅಂಗಡಿ ____________ ಇದ್ದಂತೆ.

(ಇ) ಹೊಂದಿಸಿ ಬರೆಯಿರಿ. **(5 × 1 = 5)**

| | | | |
|---|---|---|---|
| 16) (ಅ) | ಕದಡಿದ ಸಲಿಲಂ ತಿಳಿವಂದದೆ | 1) | ಜಾಲಿಯ ಮರದಂತೆ |
| (ಆ) | ಪುಲಿಗೆರೆ ಸೋಮನಾಥ | 2) | ಕುಮಾರವ್ಯಾಸ |
| (ಇ) | ಪುರಂದರದಾಸರು | 3) | ಹತ್ತಿ...ಚಿತ್ತ...ಮತ್ತು... |
| (ಈ) | ಮುಕ್ತಕಂಠ | 4) | ನಾಗಚಂದ್ರ |
| (ಉ) | ಟಿ. ಯಲ್ಲಪ್ಪ | 5) | ಸೋಮೇಶ್ವರ ಶತಕ |
| | | 6) | ಬೆಳಗು ಜಾವ |

## ಆ – ವಿಭಾಗ

II. (ಅ) **ಯಾವುದಾದರೂ ಮೂರು** ಪ್ರಶ್ನೆಗಳಿಗೆ **ಎರಡು–ಮೂರು** ವಾಕ್ಯಗಳಲ್ಲಿ ಉತ್ತರಿಸಿ. **(3 × 2 = 6)**

17) ಸೀತೆ ರಾವಣನನ್ನು ಏನೆಂದು ಬೇಡಿಕೊಂಡಳು?

18) ವೀರ ಮತ್ತು ಯೋಗಿಗೆ ಯಾವ ಅರ್ಹತೆಗಳಿರಬೇಕೆಂದು ಸೋಮನಾಥನು ಹೇಳಿದ್ದಾನೆ?

19) ಕವಿ ಬೇಂದ್ರೆ ಪ್ರಕಾರ ಮುಪ್ಪು ಮತ್ತು ಹರೆಯದ ನಡುವಿನ ವ್ಯತ್ಯಾಸವೇನು?

20) ಯಾವ ವಸ್ತುಗಳು ಕಾಲರಾಯನ ಗುಜರಿ ಸೇರಿಲ್ಲ?

**(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**
**(2 × 2 = 4)**

21) ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು?

22) ಕನ್ನಡದ ಸಮಸ್ಯೆಗಳು ಎಲ್ಲಿಯವರೆಗೂ ಇದ್ದೇ ಇರುತ್ತವೆ? ಎಂದು ಹಾ.ಮಾ. ನಾಯಕ ಹೇಳಿದ್ದಾರೆ.

23) ಅಬ್ದುಲ್ ಕಲಾಂ ಅವರ ಬದುಕಿನ ಮಂತ್ರ ಯಾವುದು?

24) ವೀರೇಂದ್ರ ಸಿಂಪಿಯವರ ಪ್ರಕಾರ ಭಾವೈಕ್ಯತೆ ಈ ದೇಶದಲ್ಲಿ ಎಲ್ಲಿದೆ?

**(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**
**(3 × 2 = 6)**

25) ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?

26) ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ನಂಬರ್ ಒನ್ ಎನಿಮಿಗಳು ಯಾರು ಯಾರು?

27) ಹುಚ್ಚುನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು?

28) ಆನೆಯನ್ನು ಮಠದವರಂತೆ ಇತರರಿಗೆ ದಾಟಿಸಿಬಿಡಲು ಕೃಷ್ಣೇಗೌಡನಿಗೆ ಇದ್ದ ತೊಡಕುಗಳೇನು?

## ಇ – ವಿಭಾಗ

III. (ಅ) **ಯಾವುದಾದರೂ ಎರಡು** ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(2 × 3 = 6)**

29) ಒಬ್ಬಳನಾಳಲಾರಿರಿ ಗಂಡರೋ ನೀವ್ ಭಂಡರೋ.

30) ಹಿತ್ತಾಳೆಗಿಂತ ಬಲುಹೀನ.

31) ಅಲ್ಲಿಯ ಮಾತು ಅವನಿಗೆ ಸಸೇಮಿರ ಬರದು.

(ಆ) **ಯಾವುದಾದರೂ ಒಂದು** ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(1 × 3 = 3)**

32) "ಈಗಿರೋ ಗಾಯಕ್ಕೆ ಔಷಧಿ ಕೊಡ್ತೆನೆ. ತಪ್ಪದೆ ಹಚ್ಚಿಕೋ".

33) "ಈ ಅದೃಷ್ಟ ನಿನಗೂ ಇತ್ತಲ್ಲೆ"?

34) ಕರ್ಮಣಿಸರದೊಳ್ ಚೆಂಬವಳಮಂ ಕೋದಂತಿರೆ.

(ಇ) **ಯಾವುದಾದರೂ ಒಂದು** ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(1 × 3 = 3)**

35) ಆನೆ ಸಾಕುವುದು ಎಂದರೆ ಎಲೆಕ್ಷನ್ನಿಗೆ ನಿಂತ ಹಾಗೆ!

36) ವೆಪನ್ ಸಾರ್. ವೆಪನ್ ನಮಗೆ ಮುಖ್ಯ.

## ಈ – ವಿಭಾಗ

IV. (ಅ) **ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **(2 × 4 = 8)**

37) ರಾವಣನಲ್ಲಿ ಕಂಡುಬರುವ ಪಶ್ಚಾತ್ತಾಪವನ್ನು ಕವಿ ಹೇಗೆ ನಿರೂಪಿಸಿದ್ದಾರೆ? ವಿವರಿಸಿ.

38) ತನಗೊದಗಿದ ಸಂಕಟವನ್ನು ಹೇಳಿಕೊಳ್ಳುವ ದ್ರೌಪದಿಯ ಸ್ವಗತದ ನುಡಿಗಳಾವುವು?

39) ಮಗು ಕಲಿತದ್ದನ್ನು ಮತ್ತು ವಿದ್ಯಾಭ್ಯಾಸ ಮಾಡುವ ವಿವರಗಳನ್ನು ತಿಳಿಸಿರಿ.

40) ಈ ಕೆಳಗಿನ ವಚನವನ್ನು ಅರ್ಥೈಸಿಕೊಂಡು ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ಒಲೆಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆಹತ್ತಿ ಉರಿದಡೆ ನಿಲಲುಬಾರದು
ಏರಿ ನೀರುಂಬಡೆ, ಬೇಲಿಕೆಯ್ಯ ಮೇವಡೆ
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯ ಮೊಲೆವಾಲು ನಂಜಾಗಿ ಕೊಲುವಡೆ,
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ!

(ಅ) ಯಾವಾಗ ನಿಲಬಹುದು? **(1 ಅಂಕ)**

(ಆ) ಯಾವಾಗ ನಿಲಲಾಗದು? **(1 ಅಂಕ)**

(ಇ) ರಕ್ಷಿಸಬೇಕಾದವರೆ ಭಕ್ಷಕರಾದಾಗ ಒದಗುವ ವಿಘಟನೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ. **(2 ಅಂಕಗಳು)**

**(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **(1 × 4 = 4)**

41) ವಾಲ್‌ಪರ್ರೈಗೆ ಬಂದ ಮಾರ್ಷ್ ಅಲ್ಲಿ ಹೇಗೆ ನೆಲೆಯೂರಿದ? ವಿವರಿಸಿ.

42) ಚಿನ್ನಮ್ಮನ ಕುಟುಂಬ ಹೊಳೆಯ ಬಗ್ಗೆ ಅಸಹನೆ ಹೊಂದಬಾರದೆಂದು ಲೇಖಕಿ ಬಯಸುವುದೇಕೆ? ವಿವರಿಸಿರಿ.

**(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **(1 × 4 = 4)**

43) ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣನ ಸಾವಿಗೆ ಕೃಷ್ಣೇಗೌಡರ ಆನೆ ಕಾರಣವೇ? ವಿವರಿಸಿರಿ.

44) ನಾಗರಾಜನ ನಿಗೂಢ ಕಣ್ಮರೆ ಬಗ್ಗೆ ಜನರ ಊಹಾಪೋಹದ ಅಭಿಪ್ರಾಯಗಳೇನು? ಸಂಗ್ರಹಿಸಿ ಬರೆಯಿರಿ.

## ಉ – ವಿಭಾಗ
## (ಭಾಷಾಭ್ಯಾಸ)

V. (ಅ) ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ ನಾಲ್ಕಕ್ಕೆ** ಸೂಚನೆಗೆ ಅನುಗುಣವಾಗಿ ಉತ್ತರಿಸಿ. **(4 × 2 = 8)**

45) ಕೆಳಗಿನ ಎರಡು ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ.

ಬಂಗಾರ, ಕಣ್ಣು, ಪುಷ್ಪ

46) ಕೆಳಗಿನ ಎರಡು ಪದಗಳ ಗುಣವಾಚಕಗಳನ್ನು ಬರೆಯಿರಿ.

ಕಲಿಭೀಮ, ಹುಸಿನಿದ್ದೆ, ಕಿರುಹಾದಿ

47) ಕೆಳಗಿನ ಎರಡು ಕ್ರಿಯಾಪದಗಳ ಧಾತುರೂಪಗಳನ್ನು ಬರೆಯಿರಿ.

ಓದುವನು, ನಲಿಯುತ್ತಾ, ಹಾಡುವಳು

48) ಕೆಳಗಿನ ಎರಡು ಪದಗಳ ವಿಭಕ್ತಿಗಳನ್ನು ಹೆಸರಿಸಿ.

ಗುರುವಿಗೆ, ವಿಶ್ವಾಸದಿಂದ, ಗದ್ಯದೊಳ್

49) ಕೆಳಗಿನ ಎರಡು ಪದಗಳ 'ತತ್ಸಮ' ರೂಪ ಬರೆಯಿರಿ.

ರಾಯ, ದನಿ, ಪಯಣ

50) ಕೆಳಗಿನ ಎರಡು ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

ತಲೆದೂಗು, ದಾರಿದೀಪ, ಗಾಳಿಸುದ್ದಿ

(ಆ) **ಯಾವುದಾದರೂ ಒಂದು** ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. **(1 × 4 = 4)**

51) ಕ್ರೀಡೆ ಮತ್ತು ನಮ್ಮ ಆರೋಗ್ಯ.

**ಅಥವಾ**

ತ್ಯಾಜ್ಯ ವಸ್ತುಗಳ ಮರುಬಳಕೆಯ ಅಗತ್ಯ.

(ಇ) **ಯಾವುದಾದರೂ ಒಂದು** ವಿಷಯವನ್ನು ಕುರಿತು ಪತ್ರ ಬರೆಯಿರಿ. **(1 × 4 = 4)**

52) ಆರ್ಯವರ್ಧನ/ಪ್ರಿಯದರ್ಶಿನಿ, ದ್ವಿತೀಯ ಪಿ.ಯು.ಸಿ., ಸರ್ಕಾರಿ ಪದವಿ ಪೂರ್ವ ಕಾಲೇಜು, ಕಾವಳಪಡೂರು, ಬಂಟ್ವಾಳ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ ಈ ವಿಳಾಸ ನಿಮ್ಮದೆಂದು ಭಾವಿಸಿ, ಹರ್ಷವರ್ಧನ/ಸಂಸ್ಕೃತಿ, ದ್ವಿತೀಯ ಪಿ.ಯು.ಸಿ. ವಿವೇಕಾನಂದ ಪದವಿ ಪೂರ್ವ ಕಾಲೇಜು, ಕುವೆಂಪು ರಸ್ತೆ, ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ ಈ ವಿಳಾಸದಲ್ಲಿರುವ ನಿಮ್ಮ ಗೆಳೆಯ/ಗೆಳತಿಗೆ ನಿಮ್ಮೂರಿನ ಜಾತ್ರಾ ಮಹೋತ್ಸವಕ್ಕೆ ಬರುವಂತೆ ಆಹ್ವಾನಿಸಿ ಪತ್ರ ಬರೆಯಿರಿ.

**ಅಥವಾ**

ಜಯವರ್ಧನ/ಜಯಶ್ರೀ, ದ್ವಿತೀಯ ಪಿ.ಯು.ಸಿ. ಶಾರದಾ ಪದವಿ ಪೂರ್ವ ಕಾಲೇಜು, ರನ್ನ ಕವಿ ರಸ್ತೆ, ಹರಿಹರ, ದಾವಣಗೆರೆ ಜಿಲ್ಲೆ ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಯನ್ನು ಕೋರಿ ನಿಮ್ಮ ಕಾಲೇಜಿನ ಪ್ರಾಚಾರ್ಯರಿಗೆ ಪತ್ರ ಬರೆಯಿರಿ.

---